10. ಅಭಿರಕ್ಷಕನ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು

(1) ಸಾಮಾನ್ಯ ಅಥವಾ ವಿಶೇಷ ಮಾರ್ಗಸೂಚಿಗಳಿಗನುಸಾರವಾಗಿ ಪರಿಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾರ್ಯಕ್ರಮ ಅಧಿಕಾರಿಗೆ ನಿಧಿಯಿಂದ ಹಣವನ್ನು ಬಿಡುಗಡೆ ಮಾಡುವಂತೆ ಏರ್ಪಾಟು ಮಾಡಲು ಅಭಿರಕ್ಷಕನು ಜವಾಬ್ದಾರನಾಗಿರತಕ್ಕದ್ದು.

(2) ಪ್ರಸ್ತಾವದ ಪೂರ್ವ ಅನುಮೋದನೆಯ ತರುವಾಯ ಕಾರ್ಯಕ್ರಮ ಅಧಿಕಾರಿಗೆ ನಿಧಿಗಳನ್ನು ಬಿಡುಗಡೆ ಮಾಡಲು, ಡೆಸ್ಕ್ ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ, ಪಂಚಾಯತ್ ರಾಜ್‌ನ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿನ ಯಾರೇ ಅಧಿಕಾರಿಗೆ, ಅಭಿರಕ್ಷಕನು ಅಧಿಕಾರಿಗಳನ್ನು ಪ್ರತ್ಯಾಯೋಜಿಸಬಹುದು.

(3) ಅಭಿರಕ್ಷಕನು, ನಿಧಿಯ ಸ್ವೀಕೃತಿಗಳು, ಬಿಡುಗಡೆ ಮಾಡಲಾದ ಹಣ, ವೆಚ್ಚಗಳು ಮತ್ತು ಶಿಲ್ಕುಗಳಿಗೆ ಸಂಬಂಧಪಟ್ಟ ಮಾಸಿಕ ವರದಿಯನ್ನು ಯೋಜನೆಯ ನಮೂನೆ-5ಬಿಯಲ್ಲಿ ರಾಜ್ಯ ಪರಿಷತ್ತಿಗೆ ಒದಗಿಸತಕ್ಕದ್ದು.

(4) ಅಭಿರಕ್ಷಕನು, ರಾಜ್ಯ ಪರಿಷತ್ತು ನಿರ್ದೇಶಿಸಬಹುದಾದಂಥ ನಮೂನೆಯಲ್ಲಿ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು. ಅದು, ನಿಧಿಯ ಸ್ವೀಕೃತಿಗಳು ಮತ್ತು ನಿಧಿಯಿಂದ ಅನುಷ್ಠಾನ ಏಜೆನ್ಸಿಗಳಿಗೆ ಬಿಡುಗಡೆ ಮಾಡಿದ ಮೊತ್ತ, ನಿಧಿಯಿಂದ ಮಾಡಲಾದ ವೆಚ್ಚ ಮತ್ತು ಬಟವಾಡೆಯಾಗದ ಸ್ವೀಕೃತಿಗಳು ಮತ್ತು ಅನುಷ್ಠಾನ ಏಜೆನ್ಸಿಗಳ ಮಟ್ಟದಲ್ಲಿ ಬಳಕೆಯಾಗದ ಮೊತ್ತಗಳನ್ನೊಳಗೊಂಡ ನಿಧಿಯಲ್ಲಿರುವ ಶಿಲ್ಕು ಇವುಗಳನ್ನು ತೋರಿಸುವ ವಾರ್ಷಿಕ ಹಣಕಾಸು ವಿವರವನ್ನು ಒಳಗೊಂಡಿರತಕ್ಕದ್ದು.

(5) ಅಭಿರಕ್ಷಕನು, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಪಡೆದ ನಿಧಿಗಳ ಬೇಡಿಕೆ ಮತ್ತು ಬಳಕೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಉದ್ಯೋಗ ಖಾತರಿ ಪರಿಷತ್ತು ಅಥವಾ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಪ್ರಪತ್ರಗಳಲ್ಲಿ ವರದಿಗಳನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ಶಿವಶೈಲಂ
ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

## ಕರ್ನಾಟಕ ರಾಜ್ಯ ನಿರುದ್ಯೋಗ ಭತ್ಯೆ ಸಂದಾಯ ನಿಯಮಗಳು-2006

ಕರ್ನಾಟಕ ರಾಜ್ಯ ನಿರುದ್ಯೋಗ ಭತ್ಯೆ ಸಂದಾಯ ನಿಯಮಗಳು-2006ರ ಕರಡನ್ನು ದಿನಾಂಕ 16.05.2006ರ ಕರ್ನಾಟಕ ರಾಜ್ಯ ಪತ್ರದ ಭಾಗ-2Aರಲ್ಲಿ ಪ್ರಕಟಿಸಿ, ಆ ದಿನಾಂಕದಿಂದ 15 ದಿನಗಳೊಳಗಾಗಿ ಸಾರ್ವಜನಿಕರಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿರುವುದರಿಂದ;

ಮತ್ತು ಸದರಿ ರಾಜ್ಯಪತ್ರವನ್ನು ಸಾರ್ವಜನಿಕರಿಗೆ ದಿನಾಂಕ 16.05.2006ರಂದು ಲಭ್ಯವಾಗುವಂತೆ ಮಾಡಿರುವುದರಿಂದ; ಮತ್ತು ಸದರಿ ಕರಡಿನ ಬಗ್ಗೆ ರಾಜ್ಯ ಸರ್ಕಾರಕ್ಕೆ ಯಾವುದೇ ಆಕ್ಷೇಪಣೆ/ಅಥವಾ ಸಲಹೆಗಳು ಬಾರದೇ ಇರುವುದರಿಂದ;

ಈಗ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005ರ (2005ರ ಕೇಂದ್ರ ಅಧಿನಿಯಮ, 42) 32ನೇ ಪ್ರಕರಣದ (1)ನೇ ಉಪ-ಪ್ರಕರಣ ಮತ್ತು 7ನೇ ಪ್ರಕರಣದ (6)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಗಿನಂತೆ ನಿಯಮಗಳನ್ನು ರಚಿಸುತ್ತದೆ, ಎಂದರೆ :

1. **ಹೆಸರು ಮತ್ತು ಪ್ರಾರಂಭ :-** ಈ ನಿಯಮಗಳನ್ನು ಕರ್ನಾಟಕ ರಾಜ್ಯ ನಿರುದ್ಯೋಗ ಭತ್ಯೆ ಸಂದಾಯ ನಿಯಮಗಳು, 2006 ಎಂದು ಕರೆಯತಕ್ಕದ್ದು.

(2) ಇವು, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು :-** ಈ ನಿಯಮಗಳಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,

(1) 'ಅಧಿನಿಯಮ' ಎಂದರೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005 (2005ರ ಕೇಂದ್ರ ಅಧಿನಿಯಮ, 42)

(2) 'ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ' ಎಂದರೆ, ಜಿಲ್ಲೆಯ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ.

(3) 'ನಿಧಿ' ಎಂದರೆ, ಈ ಅಧಿನಿಯಮದ 21ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿ.

(4) 'ಕಾರ್ಯಕ್ರಮ ಅಧಿಕಾರಿ' ಎಂದರೆ, ತಾಲೂಕಿನಲ್ಲಿರುವ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ'.

(5) 'ಯೋಜನೆ' ಎಂದರೆ, ಈ ಅಧಿನಿಯಮದ 4ನೇ ಪ್ರಕರಣದ ಮೇರೆಗೆ ಅಧಿಸೂಚಿಸಲಾದ ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ.

(6) 'ರಾಜ್ಯ ಪರಿಷತ್ತು' ಎಂದರೆ, ಈ ನಿಯಮಗಳ ಮೇರೆಗೆ ರಚಿಸಲಾದ ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಪರಿಷತ್ತು.

(7) 'ನಿರುದ್ಯೋಗ ಭತ್ಯೆ' ಎಂದರೆ, ಈ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ಮಾಡಲಾಗುವ ಸಂದಾಯ.

3. ಗ್ರಾಮ ಪಂಚಾಯತಿಯು, ಈ ಅಧಿನಿಯಮದ 4ನೇ ಪ್ರಕರಣದ ಮೇರೆಗೆ ರೂಪಿಸಲಾದ ಯೋಜನೆಗನುಸಾರವಾಗಿ ನಿರುದ್ಯೋಗ ಭತ್ಯೆಯನ್ನು ಸಂದಾಯ ಮಾಡಲು ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು.

4. ನಿರುದ್ಯೋಗ ಭತ್ಯೆಯ ಸಂದಾಯದ ಕಾರ್ಯವಿಧಾನ ಮತ್ತು ಸಂದಾಯದ ರೀತಿಯನ್ನು ಈ ಅಧಿನಿಯಮದ 4ನೇ ಪ್ರಕರಣದ ಮೇರೆಗೆ ರೂಪಿಸಿದ ಯೋಜನೆಯಲ್ಲಿ ನಿಯಮಿಸತಕ್ಕದ್ದು.

5. ನಿರುದ್ಯೋಗ ಭತ್ಯೆಯನ್ನು ಕ್ಲೇಮು ಮಾಡುವುದಕ್ಕಾಗಿ ಪೂರೈಸಬೇಕಾದ ಅತ್ಯಗತ್ಯ ಷರತ್ತುಗಳು

ಎ. ವ್ಯಕ್ತಿಯು, 'ಉದ್ಯೋಗ ಅರಸುವವರು ಹಾಗೂ ಉದ್ಯೋಗ ರಿಜಿಸ್ಟರು' ಪುಸ್ತಕದಲ್ಲಿ ಹೆಸರು ನೋಂದಾಯಿಸಿರತಕ್ಕದ್ದು, ಎಂದರೆ ಆ ಕುಟುಂಬವು ಉದ್ಯೋಗ ಕಾರ್ಡು ಹೊಂದಿರತಕ್ಕದ್ದು ಮತ್ತು ಉದ್ಯೋಗ ಕಾರ್ಡಿನಲ್ಲಿ ಆ ವ್ಯಕ್ತಿಯನ್ನು ವೈಯಕ್ತಿಕ ಸಂಖ್ಯೆಯಿಂದ ಗುರುತಿಸುವಂತಿರತಕ್ಕದ್ದು.

ಬಿ. ವ್ಯಕ್ತಿಯು, ಕೆಲಸಕ್ಕಾಗಿ ಅರ್ಜಿ ಹಾಕಿರತಕ್ಕದ್ದು, ಮತ್ತು 'ಉದ್ಯೋಗ ಬೇಡಿಕೆ ರಿಜಿಸ್ಟರು' ಪುಸ್ತಕದಲ್ಲಿ ಅರ್ಜಿಯನ್ನು ನೋಂದಾಯಿಸಿರತಕ್ಕದ್ದು.

ಸಿ. ಕೆಲಸಕ್ಕಾಗಿ ಸಲ್ಲಿಸಿದ ಅರ್ಜಿಯ ದಿನಾಂಕದಿಂದ ಹದಿನೈದು ದಿನಗಳು ಅಥವಾ ಅವನು/ಅವಳು ಕೆಲಸಕ್ಕಾಗಿ ಮಾಡಿಕೊಂಡ ಅರ್ಜಿಯ ದಿನಾಂಕ – ಇವುಗಳಲ್ಲಿ ಯಾವುದು ನಂತರದ್ದೋ ಅಂದು–ಉದ್ಯೋಗವನ್ನು ಒದಗಿಸಬಾರದು.

**6. ನಿರುದ್ಯೋಗ ಭತ್ಯೆಯನ್ನು ಸಂದಾಯ ಮಾಡದಿರುವುದಕ್ಕೆ ಇರುವ ಷರತ್ತುಗಳು ಮತ್ತು ಪರಿಸ್ಥಿತಿಗಳು**

ಎ. ಗ್ರಾಮ ಪಂಚಾಯತಿಯು,

(i) ಕೆಲಸಕ್ಕಾಗಿ ಅರ್ಜಿ ಮಾಡಿಕೊಂಡ ನೋಂದಾಯಿತ ಕಾರ್ಮಿಕನನ್ನು, ನಡೆಯುತ್ತಿರುವ ಕಾಮಗಾರಿಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲವೆಂದು;

(ii) 50 ಜನಕ್ಕಿಂತ ಕಡಿಮೆ ಸಂಖ್ಯೆಯ ಕಾರ್ಮಿಕರು ಲಭ್ಯವಿರುವ ಕಾರಣಕ್ಕಾಗಿ ಗ್ರಾಮಪಂಚಾಯತಿಯೂ ಸೇರಿದಂತೆ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಏಜೆನ್ಸಿಗೆ ಹೊಸ ಕಾಮಗಾರಿಗಳನ್ನು ಪ್ರಾರಂಭ ಮಾಡಲು ಸಾಧ್ಯವಿಲ್ಲವೆಂದು;

(iii) ನೋಂದಾಯಿತ ಕಾರ್ಮಿಕನಿಗೆ ಕೆಲಸವನ್ನು ಒದಗಿಸಬೇಕಾದ ದಿನಾಂಕದಿಂದ ಅಥವಾ ಕಾರ್ಮಿಕನು ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿದ ಅವಧಿಯಲ್ಲಿ ಅರಣ್ಯೀಕರಣ ಕಾಮಗಾರಿಗಳು ಇಲ್ಲವೆಂದು;

– ಗೊತ್ತುವಳಿಯ ಮೂಲಕ ನಿರ್ಧರಿಸಿದ್ದರೆ,

ಬಿ. ಈ ಅಧಿನಿಯಮದ 7ನೇ ಪ್ರಕರಣದ (3)ನೆಯ ಉಪಪ್ರಕರಣದ ಉಪಬಂಧಗಳಿಗೆ ಸಂಬಂಧಿಸಿದಂತೆ ನಿರುದ್ಯೋಗ ಭತ್ಯೆ ಸಂದಾಯದ ಹೊಣೆಗಾರಿಕೆಯು ನಿಂತುಹೋಗಿದ್ದರೆ;

ಸಿ. ಕೇಂದ್ರ ಸರ್ಕಾರವು, ಈ ಅಧಿನಿಯಮದ 27ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ನಿಧಿಗಳನ್ನು ನಿಲ್ಲಿಸಲು ಆದೇಶಿಸಿದೆ,

– ಆಗ ನಿರುದ್ಯೋಗ ಭತ್ಯೆಯನ್ನು ಸಂದಾಯ ಮಾಡಲಾಗುವುದಿಲ್ಲ.

7. ನಿರುದ್ಯೋಗ ಭತ್ಯೆಯು ಕುಟುಂಬದ ಉದ್ಯೋಗ ಹಕ್ಕುದಾರಿಕೆಯನ್ನು ಕಡಿತಗೊಳಿಸತಕ್ಕದ್ದಲ್ಲ

ನಿರುದ್ಯೋಗ ಭತ್ಯೆಯನ್ನು ಒದಗಿಸಿದ್ದರೂ ಸಹ ಆ ಕುಟುಂಬವು ಒಂದು ಹಣಕಾಸು ವರ್ಷದಲ್ಲಿ ಕನಿಷ್ಠ 100 ದಿನಗಳ ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿದ್ದಲ್ಲಿ ಅದನ್ನು ಪಡೆಯಲು ಹಕ್ಕು ಹೊಂದಿರುವುದು ಮುಂದುವರೆಯತಕ್ಕದ್ದು.

8. ನಿರುದ್ಯೋಗ ಭತ್ಯೆ ನಿಧಿಯ ಸ್ಥಾಪನೆ

ನಿರುದ್ಯೋಗ ಭತ್ಯೆ ನಿಧಿಯು, ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿಯ ಭಾಗವಾಗಿರತಕ್ಕದ್ದು. ರಾಜ್ಯ ಸರ್ಕಾರವು, ಈ ಅಧಿನಿಯದ ಮೇರೆಗೆ ಸಂದಾಯ ಮಾಡಬೇಕಾದ ನಿರುದ್ಯೋಗ ಭತ್ಯೆಯ ಕ್ಲೇಮುಗಳನ್ನು ಭರಿಸಲು ಸದರಿ ನಿಧಿಗೆ ಹಣ ಒದಗಿಸತಕ್ಕದ್ದು.

9. ನಿಧಿಯಿಂದ ಮಾಡಲಾದ ಬಟವಾಡೆಗಳ ಮಾಸಿಕ ವರದಿ

1. ಕಾರ್ಯಕ್ರಮ ಅಧಿಕಾರಿಯು, ನಿರುದ್ಯೋಗ ಭತ್ಯೆಗಳ ನಿಧಿಯ ಅಡಿಯಲ್ಲಿ ಮಾಡಲಾದ ವೆಚ್ಚದ ಮಾಸಿಕ ವರದಿಯನ್ನು ಈ ಯೋಜನೆಯ ನಮೂನೆ–4–ಇಯಲ್ಲಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

2. ರಾಜ್ಯ ನಿಧಿಯ ಅಭಿರಕ್ಷಕನು, ವೆಚ್ಚದ ಹಾಗೂ ನಿರುದ್ಯೋಗ ಭತ್ಯೆ ನಿಧಿಯಿಂದ ಬಿಡುಗಡೆ ಮಾಡಿದ ಹಣದ ಮಾಸಿಕ ವರದಿಯನ್ನು ಈ ಯೋಜನೆಯ ನಮೂನೆ–5–ಬಿ–ಯಲ್ಲಿ ರಾಜ್ಯ ಪರಿಷತ್ತಿಗೆ ಪರಿಗಣನೆಗಾಗಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ಶಿವಶೈಲಂ
ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

# Karnataka State Payment of Unemployment Allowance Rules 2006

Whereas the draft of the Karnataka State Payment of Unemployment Allowance Rules 2006 was published n Part IV-A of the Karnataka Official Gazette on 16.5.2006 inviting objections and suggestions to the said draft rom the general public within 15 days of its publication in the official gazette.

And whereas the said Gazette was made available to the general public on 16.5.2006. And whereas no objections or suggestions has been received by the State Government in respect of the said draft.

Now, therefore in exercise of the powers conferred by Sub-Section (1) of the Section 32 and Sub-Section 6) of the Section 7 of the National Rural Employment Guarantee Act 2005 (Central Act 42 of 2005), the Karnataka Government hereby makes the following rules namely

1. **Short Title and Commencement:**

   1) These rules may be called The Karnataka State Unemployment Allowance Payment Rules, 2006.

   2) They shall come into force from the date of its publication in the Official Gazette.

2. **Definitions:** In these rules, unless the context otherwise requires -

   (1) 'Act' means the National Rural Employment Guarantee Act, 2005 (Central Act 42 of 2005)

   (2) District Programme Co-ordinator means the Chief Executive Officer of the Zilla Panchayat in the district

   (3) 'Fund' means the Karnataka State Employment Guarantee Fund established under Sec.21 of the Act

   (4) 'Programme Officer' means the Executive Officer of the Taluk Panchayat in the Taluka

   (5) 'Scheme' means the 'Karnataka Rural Employment Guarantee Scheme' notified under Section 4 of the Act.

   (6) 'State Council' means the Karnataka State Employment Guarantee Council constituted under these Rules

   (7) 'Unemployment Allowance' means payment made under Section 7 of the Act.

3. The Grama Panchayat shall be the competent authority to pay unemployment allowance in accordance with the Scheme formulated under Section 4 of the Act.

4. The procedure and mode of payment of unemployment allowance shall be prescribed in the Scheme formulated under Section 4 of the Act.

5. **Essential Conditions to be satisfied for claiming Unemployment allowance:**

   a. The person shall be registered in the 'Register of Job-seekers and Employment' ie the Household must possess a Job-card and the person shall be identifiable by an individual number in the job-card.

   b. The person shall apply for work and the application registered in the 'Employment Demand Register'.

   c. The employment has not been provided within fifteen days of the application for work or on the date when she/he has applied for work whichever is later.

6. Conditions and circumstances when Unemployment Allowance is not payable:

   a. If the Grama Panchayat. by Resolution decides that the registered labour that has applied for work,

      i. Cannot be absorbed in on-going works;

ii. New works of any implementing agency including the Grama Panchayat cannot be started on the ground that there are less than 50 labourers available;

iii. There are no works of afforestation that can be commenced on the date when the registered labour has to be provided with work or in the period when the labour has demanded work;

b. The liability for payment of unemployment allowance has ceased with regard to the provisions of sub-section (3) of section 7 of the Act.

c. The Central Government has ordered stoppage of funds under Sub- Section (2) of the Section-27 of the Act.

– then. no unemployment allowance will be payable.

7. **Unemployment Allowance not to reduce employment entitlement of household :**

In any household, which has been provided with unemployment allowance, the household shall continue to be eligible to be provided on demand with a minimum of 100 days' work in a financial year.

8. **Establishment of Unemployment Allowance Fund :**

Unemployment Allowance Fund shall be a component of the Karnataka State Employment Guarantee Fund. The State Government shall provide monies to the said Fund to meet the claims of unemployment allowance payable under the Act.

9. **Monthly Report of disbursements from the Fund:**

1. The Program Officer shall make a monthly report of the expenditure under the unemployment allowances fund in Form-4E of the Scheme to the District Program Coordinator and the State Government.

2. The Custodian of the State Fund shall make a monthly report of the expenditure and releases made in the unemployment allowance fund for the consideration of the state council in Form-56 of the Scheme.

By Order and in the Name of the Governor of Karnataka

N.Sivasailam
Secretary to Government
Rural Development & Panchayat Raj Department.

KA / BG - GPO/ 2515 /WPP-47/ 2009 - 2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ – **IV-A** | ಬೆಂಗಳೂರು, ಬುಧವಾರ, ಸೆಪ್ಟೆಂಬರ್ ೨೩, ೨೦೦೯ (ಆಶ್ವಯುಜ ೧, ಶಕ ವರ್ಷ ೧೯೩೧) | ನಂ. ೮೨೨ |
|---|---|---|

## ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

### ಅಧಿಸೂಚನೆ

**ಸಂ. ಗ್ರಾಅಪ 08 ಉಖಾಯೋ 2009, ಬೆಂಗಳೂರು, ದಿನಾಂಕ : 17ನೇ ಸೆಪ್ಟೆಂಬರ್, 2009**

**ಕರ್ನಾಟಕ ರಾಜ್ಯ ನಿರುದ್ಯೋಗ ಭತ್ಯೆ ಸಂದಾಯ (ತಿದ್ದುಪಡಿ) ನಿಯಮಗಳು 2009**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005 (2005ರ ಕೇಂದ್ರ ಅಧಿನಿಯಮ ಸಂಖ್ಯೆ 42)ರ 7ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ ಕರ್ನಾಟಕ ರಾಜ್ಯ ನಿರುದ್ಯೋಗ ಭತ್ಯೆ ಸಂದಾಯ (ತಿದ್ದುಪಡಿ) ನಿಯಮಗಳು 2009ರ ಕರಡನ್ನು ಸದರಿ ಅಧಿನಿಯಮದ 32ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಅಗತ್ಯ ಪಡಿಸಲಾದಂತೆ, ಅಧಿಸೂಚನೆ ಸಂಖ್ಯೆ : ಗ್ರಾಅಪ : 08 : ಉಖಾಯೋ : 2009 ಬೆಂಗಳೂರು, ದಿನಾಂಕ : 21.7.2009ನ್ನು ಕರ್ನಾಟಕ ರಾಜ್ಯ ಪತ್ರದ ದಿನಾಂಕ : 29.07.2009ರ ಭಾಗ– IVಎ ರಲ್ಲಿ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಇದು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿರುತ್ತದೆ ಹಾಗೂ ಸದರಿ ರಾಜ್ಯ ಪತ್ರವು ದಿನಾಂಕ : 29–7–2009 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದೆ.

ಸದರಿ ಕರಡಿನ ಸಂಬಂಧದಲ್ಲಿ ರಾಜ್ಯ ಸರ್ಕಾರವು ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸ್ವೀಕರಿಸಿಲ್ಲದಿರುವುದರಿಂದ, ಈಗ ಕರ್ನಾಟಕ ರಾಜ್ಯ ನಿರುದ್ಯೋಗ ಭತ್ಯೆ ಸಂದಾಯ(ತಿದ್ದುಪಡಿ) ನಿಯಮಗಳು 2009 (2005ರ ಕೇಂದ್ರ ಅಧಿನಿಯಮದ ಸಂಖ್ಯೆ:42) 7ನೇ ಪ್ರಕರಣದೊಂದಿಗೆ ಓದಲಾದ 32ನೇ ಪ್ರಕರಣದ (1)ನೇ ಉಪಪ್ರಕರಣ ಮತ್ತು 2(ಬಿ) ಉಪ ಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಮುಂದಿನ ನಿಯಮಗಳನ್ನು ರಚಿಸುತ್ತದೆ ಎಂದರೆ:

1. **ಹೆಸರು ಮತ್ತು ಪ್ರಾರಂಭ** – (1) ಈ ನಿಯಮಗಳನ್ನು ಕರ್ನಾಟಕ ರಾಜ್ಯ ನಿರುದ್ಯೋಗ ಭತ್ಯೆ ಸಂದಾಯ (ತಿದ್ದುಪಡಿ) ನಿಯಮಗಳು, 2009 ಎಂದು ಕರೆಯತಕ್ಕದ್ದು.

(2) ಇವು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **2ನೇ ನಿಯಮದ ತಿದ್ದುಪಡಿ** – ಕರ್ನಾಟಕ ರಾಜ್ಯ ನಿರುದ್ಯೋಗ ಭತ್ಯೆಗಳ ಸಂದಾಯ ನಿಯಮಗಳು, 2006ರ (ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ) 2ನೇ ನಿಯಮದಲ್ಲಿ (5)ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು. ಎಂದರೆ:-

(5) 'ಯೋಜನೆ' ಎಂದರೆ, ಅಧಿನಿಯಮದ 4ನೇ ಪ್ರಕರಣದ ಮೇರೆಗೆ ಅಧಿಸೂಚನೆ ಸಂಖ್ಯೆ:ಆರ್‌ಡಿಪಿ 41 ಎನ್‌ಆರ್‌ಇ 2006 ದಿನಾಂಕ:01-02-2007ರಲ್ಲಿ ಅಧಿಸೂಚಿಸಿದ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದ "ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ".

3. **7ನೇ ನಿಯಮದ ತಿದ್ದುಪಡಿ** – ಸದರಿ ನಿಯಮಗಳ 7ನೇ ನಿಯಮಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು. ಎಂದರೆ:-

"7. **ನಿರುದ್ಯೋಗ ಭತ್ಯೆಕ್ಕಾಗಿ ಅರ್ಜಿ,** – ಒಬ್ಬ ಅರ್ಜಿದಾರನಿಗೆ ಯೋಜನೆಯ 11ನೇ ನಿಯಮ ಪ್ರಕಾರ ಹದಿನೈದು ದಿನಗಳಲ್ಲಿ ಉದ್ಯೋಗ ಒದಗಿಸದಿದ್ದರೆ ಆ ಬಗ್ಗೆ ಅರ್ಜಿದಾರನಿಗೆ ತಿಳಿಸ ತಕ್ಕದ್ದು. ನಿರುದ್ಯೋಗ ಭತ್ಯೆ ಮಂಜೂರಾತಿಯ ಎಲ್ಲಾ ಪ್ರಕರಣಗಳನ್ನು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗೆ ತಿಳಿಸತಕ್ಕದ್ದು. ಇವರು ಈ ಬಗ್ಗೆ ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸತಕ್ಕದ್ದು.

4. **9ನೇ ನಿಯಮದ ಪ್ರತಿಯೋಜನೆ** – ಸದರಿ ನಿಯಮಗಳ 9ನೇ ನಿಯಮಕ್ಕೆ ಈ ಮುಂದಿನ ನಿಯಮಗಳನ್ನು ಪ್ರತಿಯೋಜಿಸತಕ್ಕದ್ದು. ಎಂದರೆ, –

"9 ವರದಿ: ನಿರುದ್ಯೋಗ ಭತ್ಯೆ ಸಂದಾಯ ಮಾಡಿದ ಅಥವಾ ಸಂದಾಯ ಮಾಡಿಲ್ಲದ ಅಥವಾ ವಿಳಂಬ ಸಂದಾಯದ ಪ್ರತಿಯೊಂದು ಪ್ರಕರಣವನ್ನು ಅಥವಾ ಸಂದಾಯ ಅಥವಾ ಸಂದಾಯ ಮಾಡಿಲ್ಲದ ಅಥವಾ ವಿಳಂಬ ಸಂದಾಯದ ಕಾರಣಗಳ ಸಹಿತ ಮತ್ತು ಜವಾಬ್ದಾರನಾದ ವ್ಯಕ್ತಿಯ ವಿರುದ್ಧ ಕೈಗೊಂಡಿರುವ ಕ್ರಮದೊಂದಿಗೆ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ರಾಜ್ಯ ಸರ್ಕಾರಕ್ಕೆ ಸಲ್ಲಿಸುವ ವಾರ್ಷಿಕ ವರದಿಯಲ್ಲಿ ವರದಿ ಮಾಡತಕ್ಕದ್ದು.

10. **ಕಾರ್ಯಕ್ರಮ ಅಧಿಕಾರಿಯ ಹೊಣೆಗಾರಿಕೆ:** ಕಾರ್ಯಕ್ರಮ ಅಧಿಕಾರಿಯು, ನಿರುದ್ಯೋಗ ಭತ್ಯೆಯ ತ್ವರಿತ ಸಂದಾಯಕ್ಕೆ ಹೊಣೆಗಾರನಾಗಿರತಕ್ಕದ್ದು.

11. **ನಿರುದ್ಯೋಗ ಭತ್ಯೆಗಳ ಸಂದಾಯ:** ಅರ್ಜಿದಾರನು ನಿರುದ್ಯೋಗ ಭತ್ಯೆದ ಸಂದಾಯಕ್ಕೆ ಅರ್ಹನಾಗಿದ್ದರೆ, ನಿರುದ್ಯೋಗ ಭತ್ಯೆ ಸಂದಾಯ ಮಾಡಬೇಕಿದ್ದ ದಿನಾಂಕದಿಂದ ಹದಿನೈದು ದಿನಗಳಿಗೆ ಮೀರದಂತೆ ಅವನಿಗೆ ಅದನ್ನು ಸಂದಾಯ ಮಾಡತಕ್ಕದ್ದು. ಯಾವುದೇ ವಿಳಂಬ ಉಂಟಾದ ಸಂದರ್ಭದಲ್ಲಿ, ಭತ್ಯೆ ಪಡೆಯುವವರು, ಅಧಿನಿಯಮದ ಅನುಸೂಚಿ-II ರ ಪ್ಯಾರಾ 30ರಲ್ಲಿ ಉಪಬಂಧಿಸಲಾದಂತೆ ನಷ್ಟ ಪರಿಹಾರಕ್ಕೆ ಹಕ್ಕುಳ್ಳವರಾಗಿರತಕ್ಕದ್ದು.

12. **ಮಜೂರಿ ದರ:** ನಿರುದ್ಯೋಗ ಭತ್ಯೆ ಸಂದಾಯವು, ಹಣಕಾಸು ವರ್ಷದ ಅವಧಿಯಲ್ಲಿ ಮೊದಲ ಮೂವತ್ತು ದಿವಸಗಳಿಗಾಗಿ ಮಜೂರಿ ದರದ ನಾಲ್ಕನೇ ಒಂದರಷ್ಟಿರತಕ್ಕದ್ದು ಮತ್ತು ಹಣಕಾಸು ವರ್ಷದ ಇನ್ನುಳಿದ ಅವಧಿಗಾಗಿ ಮಜೂರಿ ದರದ ಅರ್ಧದಷ್ಟಿರತಕ್ಕದ್ದು.

13. **ಕಾರ್ಯಕ್ರಮ ಅಧಿಕಾರಿಯ ಲೋಪಗಳು:** ಕಾರ್ಯಕ್ರಮ ಅಧಿಕಾರಿಯು, ನಿರುದ್ಯೋಗ ಭತ್ಯೆ ಮಂಜೂರು ಮಾಡಿದ ತರುವಾಯ ಉಪಬಂಧಗಳನ್ನು ಉಲ್ಲಂಘಿಸಿ ನಿರುದ್ಯೋಗ ಭತ್ಯೆಯಾಗಿ ಸಂದಾಯ ಮಾಡಿದ ಮೊತ್ತಕ್ಕೆ ಹೊಣೆಗಾರರೆಂದು ಕಂಡುಬಂದಂತಹವರ ವಿರುದ್ಧ ಶಿಸ್ತು ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದು. ಸೂಕ್ತ ವಿಚಾರಣೆಯ ತರುವಾಯ ಮೊತ್ತವನ್ನು ವಸೂಲಿ ಮಾಡತಕ್ಕದ್ದು. ವಿಚಾರಣೆಯ ವ್ಯವಹರಣೆಗಳನ್ನು ನಿರುದ್ಯೋಗ ಭತ್ಯೆದ ಸಂದಾಯವನ್ನು ಸ್ವೀಕರಿಸಿದ 90 ದಿನಗಳ ಒಳಗಾಗಿ ಪೂರ್ಣಗೊಳಿಸತಕ್ಕದ್ದು".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಪಿ. ರವಿಕುಮಾರ್**
ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**RURAL DEVELOPMENT AND PANCHAYAT RAJ SECRETARIAT**

**NOTIFICATION**

**No. RDP 8 EGS 2009, Bangalore, Dated : 17th September, 2009**

**Karnataka State Payment of Unemployment Allowance (Amendment) Rulrs, 2009**

Whereas the draft of the Karnataka State Unemployment Allowances Payment Rules, 2009 further to amend the same, which the Government of Karnataka proposes to make in exercise of the powers conferred by Sec.32 of NREGA-2005 (Central Act No.42 of 2005) was published as required by Sub-Section(1) of the Section 32 of the said Act in Notification No.RDP:8:EGS:2009, Bangalore dated: 21st July 2009 in Part-IV A of the Karnataka Gazette on 29-7-2009 inviting objection and suggestions to the said draft from all persons likely to be affected there from within 30 days of its publication in the official gazette and whereas the said Gazette was made available to the general public on 29-7-2009. And whereas no objections or suggestions have been received by the State Government in respect of the said draft.

Now, therefore in exercise of the powers conferred under Sub-Section(1) and Sub-Section 2(b) of Section 32 and read with Section 7 of the National Rural Employment Guarantee Act-2005(Central Act 42 of 2005), the Karnataka Government hereby makes the following rules viz.,

**DRAFT RULES**

**1. Title and commencement,-** (1) These rules may be called the Karnataka state Payment of Unemployment Allowance (Amendment) Rules, 2009.
(2) They shall come into force from the date of their publication in the official Gazette.

**2. Amendment of rule 2, - In rule 2 of the Karnataka State Payment of Unemployment Allowances rules 2006 (hereinafter referred as said rules), for clause (5) the following shall be substituted, namely. -**

" (5) 'Scheme' means the 'Karnataka Rural Employment Guarantee scheme' notified in Notification No. RDP 41 NRE 2006 dated:01-02-2007 under Section 4 of the Act and amended from time to time"

**3. Amendment of rule 7,- For rule 7 of the said rules, the following shall be substituted namely,-**

**"7. Application for unemployment allowance,-**

If an applicant is not provided Employment within fifteen days as per rule 11 of the scheme, it should be intimated to the applicant. All cases of sanctioning unemployment allowance should be intimated to the District Programme Co-ordinator who in turn shall submit a report to the Government.

**4. Substitution of rule 9,- For rule 9 of the said rules, the following rules shall be substituted namely,-**

"**9. Report:** Every case of payment or non-payment or delayed payment of unemployment allowance shall be reported in the annual report submitted by the District Programme Coordinator to the State Government along with the reasons for such payment or non-payment or delayed payment, and with the action initiated against the responsible person."

**10. The responsibility of the Programme officer**: The programme officer shall be responsible for the prompt payment of unemployment allowance.

**11. Payment of unemployment Allowances:** If the applicant is eligible for payment of unemployment allowance he shall be paid the same not later than fifteen days from the date on which unemployment allowance was due. In the event of any delay, the recipients shall be entitled to compensation as provided in the Para 30 of schedule II of the Act .

**12. Wage rate**: Payment of unemployment allowance shall be one fourth of the wage rate for the first thirty days during the financial year and half of the wage rate for the remaining period of the financial year.

**13. Lapses of Programme officer:** The Programme Officer after sanctioning the unemployment allowance, shall, initiate disciplinary proceedings against those who are found responsible for amount paid, as unemployment allowance in violation of the provisions, the amount shall be recovered after the due enquiry. The enquiry proceedings should be completed within 90 days of the receipt of payment of unemployment allowance."

By Order and in the name of the Governor of Karnataka,

**P. Ravikumar**
Secretary to Government,
Rural Development and Panchayat Raj Department

---

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು.